# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 769

ಸದಸ್ಯರ ಹೆಸರು : ಶ್ರೀ ಸಿ.ಎನ್ ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)

ಉತ್ತರಿಸುವ ದಿನಾಂಕ : 12.12.2025.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವಿವಿಧ ಗ್ರಾಮ ಪಂಚಾಯಿತಿಗಳ ವಿವಿಧ ಹುದ್ದೆಗಳಲ್ಲಿ ಖಾಯಂ ಹಾಗೂ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ ನೌಕರರ ಸಂಖ್ಯೆ ಎಷ್ಟು; (ವಿವರ ಒದಗಿಸುವುದು) | ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ ಹಾಗೂ ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಒಟ್ಟು ಸಂಖ್ಯೆ:4686. (ಕೆಳಗಿನ ಪಟ್ಟಿ ನೋಡಿ) ಗ್ರಾಮ ಪಂಚಾಯಿತಿಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಯಾವುದೇ ನೌಕರರು ಕಾರ್ಯನಿರ್ವಹಿಸುತ್ತಿರುವುದಿಲ್ಲ. |
| (ಆ) | ಈ ಪೈಕಿ ವಿವಿಧ ಕಾರಣಗಳಿಂದ ವೇತನ ತಡೆಹಿಡಿದಿರುವ ಖಾಯಂ ಮತ್ತು ಗುತ್ತಿಗೆದಾರರ ಸಂಖ್ಯೆ ಎಷ್ಟು; ಅದಕ್ಕೆ ಕಾರಣಗಳೇನು; | ಗ್ರಾಮ ಪಂಚಾಯತಿ ನೌಕರರಿಗೆ ಸರ್ಕಾರದಿಂದ PFMS ಮೂಲಕ ಹಾಗೂ ಸ್ವಂತ ಸಂಪನ್ಮೂಲದಿಂದ ವೇತನ ಪಾವತಿಸಲಾಗುತ್ತಿದ್ದು, ವೇತನವನ್ನು ತಡೆ ಹಿಡಿದಿರುವುದಿಲ್ಲ. |

| ಕ್ರ ಸಂ | ಹುದ್ದೆ | ಮೈಸೂರು ಜಿಲ್ಲೆ | ಚಾಮರಾಜನಗರ ಜಿಲ್ಲೆ |
|---|---|---|---|
| 1. | ಪಂಚಾಯತಿ ಅಭಿವೃದ್ಧಿ ಅಧಿಕಾರಿ: | 253 | 105 |
| 2. | ಗ್ರೇಡ್-1 ಕಾರ್ಯದರ್ಶಿ: | 135 | 42 |
| 3. | ಗ್ರೇಡ್-2 ಕಾರ್ಯದರ್ಶಿ: | 95 | 47 |
| 4. | ದ್ವಿತೀಯ ದರ್ಜೆ ಲೆಕ್ಕ ಸಹಾಯಕ: | 140 | 66 |
| 5. | ಕರವಸೂಲಿಗಾರ: | 221 | 127 |
| 6. | ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್: | 240 | 149 |
| 7. | ಅಟೆಂಡರ್: | 182 | 108 |
| 8. | ನೀರುಗಂಟಿ: | 1274 | 744 |
| 9. | ಸ್ವಚ್ಛತಾಗಾರ: | 266 | 144 |
| 10. | ಗ್ರಂಥಾಲಯ ಮೇಲ್ವಿಚಾರಕರು | 226 | 122 |
| | | **3032** | **1654** |
| | **ಒಟ್ಟು** | **4686** | |

| | | |
|---|---|---|
| (ಇ) | ಇತ್ತೀಚೆಗೆ ಹೊಂಗನೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೀರುಗಂಟಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣ ವರದಿಯಾಗಿದ್ದು, ಸ್ವಯಂ ನಿವೃತ್ತಿ ನಂತರ ಇವರಿಗೆ ಬರಬೇಕಾದ ವೇತನ ಪಾವತಿ ಆಗಿಲ್ಲದಿರವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಹೊಂಗನೂರು ಗ್ರಾಮ ಪಂಚಾಯಿತಿಯಲ್ಲಿ ತೆರವಾಗಿದ್ದ ವಾಟರ್ ಮ್ಯಾನ್ ಹುದ್ದೆಗೆ ಕುಡಿಯುವ ನೀರಿನ ಸಮಸ್ಯೆ ಇದ್ದುದರಿಂದ ದಿನಾಂಕ:04-11-2016 ರಂದು ನಡೆದ ಸಾಮಾನ್ಯ ಸಭೆಯಲ್ಲಿ ನಿರ್ಣಯಿಸಿದಂತೆ ಶ್ರೀ ಚಿಕ್ಕೂಸನಾಯಕ ಬಿನ್ ರಂಗನಾಯಕ ರವರನ್ನು ತಾತ್ಕಾಲಿಕವಾಗಿ ಗೌರವಧನ ಆಧಾರದ ಮೇಲೆ ವಾಟರ್ ಮ್ಯಾನ್ ಹುದ್ದೆಗೆ ನೇಮಿಸಿಕೊಳ್ಳಲಾಗಿರುತ್ತದೆ. ಸದರಿಯವರ ಆಧಾರ್ ಕಾರ್ಡ್‌ನಲ್ಲಿ ಜನ್ಮ ದಿನಾಂಕ:01.01.1962 ಇದ್ದು ದಿನಾಂಕ:01.01.2022ಕ್ಕೆ 60 ವರ್ಷ ಪೂರೈಸಿದ್ದರೂ ಸದರಿಯವರನ್ನು ನಿವೃತ್ತಿ ಮಾಡದೇ ವಾಟರ್ ಮ್ಯಾನ್ ಆಗಿ ಮುಂದುವರಿಸಿಕೊಂಡು ಹೋಗಿರುತ್ತಾರೆ.<br>ಗ್ರಾಮ ಪಂಚಾಯಿತಿಯಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿ ಶ್ರೀ ಚಿಕ್ಕೂಸನಾಯಕ, ನೀರುಗಂಟಿ, ಹೊಂಗನೂರು ಗ್ರಾಮ ಪಂಚಾಯಿತಿ ರವರಿಗೆ 2016-17ನೇ ಸಾಲಿನಿಂದ 2025-26ನೇ ಸಾಲಿನ ಅಕ್ಟೊಬರ್ ಮಾಹೆಯವರಿಗೆ ಗೌರವಧನ ಒಟ್ಟು ರೂ.2,88,941/-ಗಳು ಪಾವತಿಸಿರುವುದು ಕಂಡುಬಂದಿದ್ದು, ಆದರೆ, ಸದರಿ ಮೊತ್ತವು ಯಾವ ಯಾವ ಮಾಹೆಗಳಿಗೆ ಪಾವತಿಸಿರುತ್ತಾರೆ ಹಾಗೂ ಎಷ್ಟು ಮಾಹೆಗಳ ಗೌರವಧನ ನೀಡಬೇಕೆಂಬುದರ ಬಗ್ಗೆ ದಾಖಲಾತಿ ನಿರ್ವಹಣೆ ಮಾಡಿರುವುದಿಲ್ಲ. |
| (ಈ) | ಹಾಗಿದ್ದಲ್ಲಿ, ವೇತನ ಪಾವತಿಸದಿರುವುದಕ್ಕೆ ಕಾರಣಗಳೇನು; ಕೂಡಲೇ ಅವರ ಕುಟುಂಬಕ್ಕೆ ಬಾಕಿ ವೇತನವನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದೇ? | ಆತ್ಮಹತ್ಯೆ ಮಾಡಿಕೊಂಡಿರುವ ಶ್ರೀ ಚಿಕ್ಕೂಸನಾಯಕ ಬಿನ್ ರಂಗನಾಯಕ ರವರು 60 ವರ್ಷ ಪೂರೈಸಿದ್ದರೂ ಸಹ ನಿವೃತ್ತಿ ಮಾಡದೇ ಗ್ರಾಮ ಪಂಚಾಯಿತಿಯಲ್ಲಿ ತಾತ್ಕಾಲಿಕ ವಾಟರ್ ಮ್ಯಾನ್ ಆಗಿ ಮುಂದುವರೆಸಿ, ಕೆಲಸ ನಿರ್ವಹಿಸುತ್ತಿದ್ದು, ಗ್ರಾಮ ಪಂಚಾಯಿತಿ ದಾಖಲಾತಿಗಳನ್ನು ಪರಿಶೀಲಿಸಿ ಸದರಿ ನೌಕರರಿಗೆ ಯಾವ ಯಾವ ಮಾಹೆಯಿಂದ ಗೌರವಧನ ಪಾವತಿಯಾಗಿದೆ ಎಂಬುದರ ಬಗ್ಗೆ ನಿಖರವಾಗಿ ನಮೂದಿಸಿರುವುದಿಲ್ಲ. ಯಾವ ಯಾವ ಮಾಹೆಯಿಂದ ಯಾವ ಯಾವ ಮಾಹೆಯವರೆಗೆ ಗೌರವಧನ ಬಾಕಿ ಪಾವತಿಸಿಬೇಕಾಗಿರುವ ಬಗ್ಗೆ ಎಷ್ಟು ಮಾಹೆಗಳ ಗೌರವಧನ ಬಾಕಿ ನೀಡಬೇಕಾಗಿದೆ ಎಂಬುದರ ಬಗ್ಗೆ ಗ್ರಾಮ ಪಂಚಾಯಿತಿಯ ಯಾವುದೇ ನಗದು ಪುಸ್ತಕ, ಹಾಜರಾತಿ ದಾಖಲಾತಿಗಳು/ವಹಿಗಳನ್ನು ನಿರ್ವಹಣೆ ಮಾಡಿರುವುದಿಲ್ಲ.<br>ಸದರಿ ವಿಚಾರದಲ್ಲಿ ಹೊಂಗನೂರು ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪ್ರಭಾರ) ರವರನ್ನು ವಿಚಾರಣೆ ಕಾಯ್ದಿರಿಸಿ, ಅಮಾನತ್ತುಗೊಳಿಸಲಾಗಿರುತ್ತದೆ ಹಾಗೂ ಇಲಾಖಾ ವಿಚಾರಣೆ ಕೈಗೊಳ್ಳಲು ಕ್ರಮ ವಹಿಸಲಾಗಿದೆ. |

**ಸಂಖ್ಯೆ:** ಗ್ರಾಅಪ 957 ಗ್ರಾಪಂಅ 2025

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.